**<u>ದಿನಾಂಕಃ 18-10-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ಯು.ಡಿ.ಡಿ.ವಕೀಲರಿಂದಃ</u>**

ನಿ.ಪಿ-6 Memorandum of Deposit of Title Deed ರ 1 ನೇ ಪುಟದ ಕೆಳಗಿನಿಂದ 4 ನೇ ಸಾಲಿನಲ್ಲಿ ವರ್ಧಮಾನ ಕೋ-ಅಪರೇಟಿವ್ ಬ್ಯಾಂಕ್ ಹುಬ್ಬಳ್ಳಿ , ಬ್ರಾಂಚ್ ರಾಣೇಬೆನ್ನೂರಿನ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸದರಿ ರಾಣೇಬೆನ್ನೂರಿನ ಸದರಿ ಶಾಖೆಯ ಎಷ್ಟು ಸಿಬ್ಬಂದಿಗಳನ್ನು ಹುಬ್ಬಳ್ಳಿಯ ಶಾಖೆಯಲ್ಲಿ ವಿಲೀನಕೊಂಡ ಸಮಯದಲ್ಲಿ ಉಳಿಸಿಕೊಂಡಿದ್ದರು ಎನ್ನುವ ಬಗ್ಗೆ (Reference to Ex.P-24 to Ex.P-26) ನಾನು ಪರಿಶೀಲನೆ ಮಾಡಿರುವುದಿಲ್ಲ. ನಿ.ಪಿ-27 ರ ದಿಃ 06-08-2005 ರ ಶಿಲ್ಲು ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುವ ಪ್ರಕಟಣೆಯಲ್ಲಿ ಬ್ಯಾಂಕ್ ನ ಆಡಳಿತಾತ್ಮಕ ಕಾರಣಕ್ಕಾಗಿ ರಾಣೇಬೆನ್ನೂರು ಶಾಖೆಯನ್ನು ಸೋಮವಾರ ದಿಃ 22-08-2005 ರಿಂದ ಹುಬ್ಬಳ್ಳಿಯ ಪ್ರಧಾನ ಶಾಖೆ , ಕಾಳಮ್ಮನ ಅಗಸಿ , ಮಹಾವೀರ ಗಲ್ಲಿ ಹುಬ್ಬಳ್ಳಿಗೆ ಸ್ಥಳಾಂತರಿಸಲಾಗುವುದು ಎಂದು

ಪ್ರಕಟಿಸಲಾಗಿರುವ ಪ್ರಕಟಣೆಗೆ ಸಂಬಂಧಿಸಿದಂತೆ ಸದರಿ ಬ್ಯಾಂಕ್ ನವರಿಗೆ ನಾನು ರಾಣೇಬೆನ್ನೂರಿನ ಶಾಖೆ ವಿಲೀನಗೊಂಡಿದೆ ಅಥವಾ ಕೇವಲ ಸ್ಥಳಾಂತರಿಸಲಾಗಿದೆ ಎನ್ನುವ ಬಗ್ಗೆ ನಾನು ಪರಿಶೀಲನೆ ಅಥವಾ ತನಿಖೆ ಕೈಗೊಂಡಿರುವುದಿಲ್ಲ . ತನಿಖೆಯ ಸಮಯದಲ್ಲಿ ನಾನು ಪ್ರಧಾನ ಕಚೇರಿ ಮತ್ತು ರಾಣೇಬೆನ್ನೂರು ಶಾಖೆಯಲ್ಲಿ ಬಳಸಲಾಗುವ ಮೊಹರು (Seal) ಗಳನ್ನು ನಾನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸದರಿ ಬ್ಯಾಂಕ್ ನವರಿಗೆ ಸದರಿ ಬ್ಯಾಂಕ್ ನವರು ತಮ್ಮ ವ್ಯವಹಾರಗಳಲ್ಲಿ ಯಾವ-ಯಾವ ತರಹದ ಮೊಹರುಗಳನ್ನು ಉಪಯೋಗಿಸುತ್ತಿದ್ದರು ಎನ್ನುವ ಬಗ್ಗೆ ಸದರಿಯವರಿಂದ ವಿವರವನ್ನು ಪಡೆದು ಕೊಂಡಿರುವುದಿಲ್ಲ . ಸದರಿಯ ಹುಬ್ಬಳ್ಳಿಯ ಶಾಖೆ ರಾಯಚೂರು ಜಿಲ್ಲೆಯ ಸಿಂದನೂರು ತಾಲ್ಲೂಕಿನಲ್ಲಿ ಸಿಂದನೂರು ಅರ್ಬನ್ ಸೌಹಾರ್ದ ಕೊ-ಅಪರೇಟಿವ್ ಬ್ಯಾಂಕ್ ಲಿ. ಎಂದು ವಿಲೀನಗೊಂಡಿದೆ ಎಂದು ನಿ.ಪಿ-35 ರ ದಾಖಲೆಯೊಂದಿಗೆ ಲಗತ್ತಾಗಿರುವ ದಿಃ 21-04-2008 ರಂದು ಸಹಕಾರ ಸಂಘಗಳ ನಿಬಂಧಕರ ಕಚೇರಿ, ನಂ.1 ಆಲಿ ಆಸ್ಕರ ರಸ್ತೆ, ಬೆಂಗಳೂರು-52 ರಲ್ಲಿ

ಸಂಖ್ಯೆ.ಆರ್.ಎಸ್.ಆರ್/208/ತಿದ್ದುಪಡಿ/2007-08 ರಂದು ಆದೇಶ ಆಗಿರುತ್ತದೆ ಎಂದರೆ ಸರಿ. ಸದರಿ ಆದೇಶದ ಪ್ರಕಾರ ಹುಬ್ಬಳ್ಳಿಯ ಶಾಖೆಯಿಂದ ಸದರಿ ಸಿಂದನೂರಿನ ಶಾಖೆಗೆ ಎಷ್ಟು ಸಿಬ್ಬಂದಿಗಳನ್ನು ವರ್ಗಾವಣೆ ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ಸದರಿ ಬ್ಯಾಂಕ್ ನವರಿಗೆ ನಾನು ಯಾವುದೇ ವಿವರಣೆಯನ್ನು ಕೇಳಿರುವುದಿಲ್ಲ .

ಮುಂದುವರೆದ ಪಾಟೀ ಸವಾಲಿಗೆ ಸಮಯ ಬೇಡಿರುವುದರಿಂದ ಮುಂದೂಡಲಾಗಿದೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

Sd/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.